ಎಂಬ ಹೆಸರಿಗೆ ಕಾರಣವಾಯಿತು. 'ಬಕಾಲ' ಕಾವ್ಯದಲ್ಲಿ ಮತ್ತು ನಂತರದಲ್ಲಿಯೂ ಅವರು ದಲಿತ ಆಧ್ಯಾತ್ಮಿಕ, ಅನುಭಾವಿಕ ಪರಂಪರೆಯನ್ನು ಮುಂದುವರೆಸಿದರು. ಅವರ ಕಾವ್ಯ ಶಬ್ದದ ಹಂಗನ್ನು ಮೀರಿ, ಮೂರ್ತ ಭೌತಿಕ ವಿವರಗಳಿಂದ ಜಿಗಿದು ಅವ್ಯಕ್ತದ ಕಡೆ ಸಾಗುತ್ತ ಹೊರಟಿತು. ಆದರೆ ಮುಟ್ಟಬಾರದವನೆನಿಸಿಕೊಂಡವನ ತಳಮಳ ನಿರಂತರವಾಗಿ ಕಾಡುತ್ತಲೇ ಇತ್ತು. ಶಿಷ್ಟ ಪರಂಪರೆಯ ಆಧ್ಯಾತ್ಮಿಕ ಅನುಭವಕ್ಕೆ ಮುಖಾಮುಖಿಯಾಗಲು ಅದು ತನ್ನ ಈ ವಿಶಿಷ್ಟ ಅನುಭವವನ್ನೇ ಮೆಟ್ಟಿಲಾಗಿಸಿಕೊಂಡಿತು. ಇದನ್ನು ವಿಮರ್ಶಕ ಡಿ.ಆರ್. ನಾಗರಾಜ್ 'ದಲಿತ ಆಧ್ಯಾತ್ಮಿಕ ಚಿಂತನೆಯ ಧಾರೆಯನ್ನು ದೇವನೂರ ಮಹಾದೇವ ಗದ್ಯದಲ್ಲಿ ಸಾಧಿಸಿದ್ದರೆ, ಕೆ.ಬಿ. ಸಿದ್ಧಯ್ಯನವರು ಕಾವ್ಯದಲ್ಲಿ ಅತ್ಯಂತ ಶಕ್ತ ಪ್ರತಿನಿಧಿ' ಎಂದು ಗುರುತಿಸುತ್ತಾರೆ.

ಈ ದೇಹ, ನನ್ನ ದೇಹ ಇಡೀ ದೇಹ
ಭವದ ಸಾಲ
ತೀರಿ ಹೋಗಲೆಂದು ಸಾಲ
ಇಡೀ ದೇಹ ಮಾರಿಬಿಟ್ಟೆ
ಮೂರು ಕಾಸಿಗೆ
ಕೊಲ್ಲುವವರೂ ಕೊಳ್ಳಲಿಲ್ಲ
ಮುಡಿಯುವವರೂ ಮುಟ್ಟಲಿಲ್ಲ
ಇರಲಿ ಬಿಡು ಈ ದೇಹ
ಹೋಗಲಿ ಬಿಡು ನನ್ನ ದೇಹ
ಎಂದು ಅರಿತು ಕಟ್ಟಕಡೆಗೆ
ಸುಲುಸುಲಿದು ಸುಲಿದು
ಚರ್ಮ ಸುಲಿದು
ಮೆಟ್ಟು ಹೊಲಿದು ಮೆಟ್ಟೀ ಮೆಟ್ಟೀ ಮೆಟ್ಟೀ
ಬಿಟ್ಟು ಬಿಟ್ಟೆ ಮೆಟ್ಟು ಬಿಡುವ ಜಾಗದಲ್ಲಿ.

**'ಗಲ್ಲೆಬಾನಿ' – ಖಂಡ ಕಾವ್ಯದಿಂದ**

'ಬಕಾಲ'ದಿಂದ ಆರಂಭವಾದ ದಲಿತ ಸಾಂಸ್ಕೃತಿಕ ಅನನ್ಯತೆಯ ಅನ್ವೇಷಣೆ, ಎರಡನೇ ಸಂಕಲನವಾದ 'ದಕ್ಲ ಕಥಾದೇವಿ ಕಾವ್ಯ'ದಲ್ಲಿ ವಿಸ್ತರಣೆ ಪಡೆಯಿತು. ದಲಿತ ಬದುಕಿನ ವಿಭಿನ್ನ ಆಯಾಮಗಳನ್ನು ಈ ಕಾವ್ಯ ಸಂತನ ರೀತಿಯಲ್ಲಿ ಇದಿರಾಗುತ್ತದೆ. ಈ ಲೋಕದಲ್ಲಿ ಹೆಣ್ಣೇ ಕಡೆಯ ಜನ್ಮ ಅದರಾಚೆಗೆ ಇನ್ನೇನೂ ಇಲ್ಲವೆನ್ನುವ ಈ ಕಾವ್ಯದ ಮಾತಿಗೆ ನೂರಾರು ಅರ್ಥಗಳನ್ನು ಹೊಳೆಯಿಸುವ ಶಕ್ತಿಯಿದೆ. 'ದಕ್ಲ ಕಥಾದೇವಿ ಕಾವ್ಯ' ದಲಿತ ಪುರಾಣವನ್ನು ಹೇಳುತ್ತಲೇ ಆದಿಮ ಮತ್ತು ಆಧುನಿಕತೆಯ ಸಂಕೀರ್ಣತೆಯನ್ನು ಮುಖಾಮುಖಿಗೊಳಿಸುತ್ತದೆ. ತಮ್ಮ ಆರಂಭದ 'ಬಕಾಲ'ಕ್ಕಿಂತಲೂ ಹೆಚ್ಚು ಸ್ಪಷ್ಟವಾಗಿ, ಮೂರ್ತವಾಗಿ, ದಲಿತ ಬದುಕಿನ ಸಾಂಸ್ಕೃತಿಕ ಚರಿತ್ರೆಯನ್ನು ತೆರೆದಿಡುತ್ತದೆ. 'ಬಕಾಲ'ವನ್ನು ವಿಮರ್ಶಕ ಕಿ.ರಂ. ನಾಗರಾಜ್ ವಿಮರ್ಶಿಸುತ್ತಾ, 'ಕೆ.ಬಿ. ಸಿದ್ಧಯ್ಯನವರ ಬಕಾಲದಲ್ಲಿ ಅಮೂರ್ತತೆಯ ಪೊರೆ ಮುಚ್ಚಿದೆ' ಎಂದು ಹೇಳಿದ್ದರು. ಆದರೆ 'ದಕ್ಲ ಕಥಾದೇವಿ ಕಾವ್ಯ'ದ ಹೊತ್ತಿಗೆ ಅಮೂರ್ತತೆಯ ಪೊರೆ ಕಳಚಿ ದಲಿತ ಸಂಸ್ಕೃತಿ ಅನಾವರಣಗೊಂಡಿದೆ.

'ಅನಾತ್ಮ' ಕೇಬಿಯವರ ಮೂರನೆಯ ಖಂಡಕಾವ್ಯ. ಬೌದ್ಧಧರ್ಮದಲ್ಲಿ 'ಅನಾತ್ಮ'ಕ್ಕೆ ವಿಶೇಷ ಅರ್ಥವಿದೆ. ಬೌದ್ಧಧರ್ಮದ ಮೂರು ತಾತ್ವಿಕ ಆಧಾರಸ್ತಂಭಗಳೆಂದರೆ, ಅನಾತ್ಮ, ಅನಿತ್ಯ ಮತ್ತು ದುಃಖ. ಕೇಬಿಯವರ ಪ್ರತಿಭೆ 'ಅನಾತ್ಮ' ನಂತರದ 'ಗಲ್ಲೇಬಾನಿ' ಕಾವ್ಯದ ವೇಳೆಗೆ ಬೌದ್ಧ ಧರ್ಮ, ವಚನ ಮುಂತಾದ ಜಾತ್ಯತೀತ ಆಧ್ಯಾತ್ಮಿಕ ಧಾರೆಗಳ ಜೊತೆಯಲ್ಲಿ ದಲಿತ ಬದುಕಿನ ಬದಲಾವಣೆಯನ್ನು ಜಾಗತೀಕರಣದ ಪರಿಪ್ರೇಕ್ಷದಲ್ಲಿ ಹಿಡಿಯುವ ಪ್ರಯತ್ನ ಮಾಡಿದೆ.

ಕೇಬಿಯವರ ಒಟ್ಟು ಕಾವ್ಯ ಬಹುಮುಖಿ ಸಂಸ್ಕೃತಿಯ ಪ್ರಮುಖ ಧಾರೆಯಾದ ದಲಿತ ಬದುಕಿನ ಅನನ್ಯ ಸಾಂಸ್ಕೃತಿಕ ರೂಪವನ್ನು ಅನಾವರಣ ಮಾಡುವಂಥದ್ದು. ಈ ನಾಲ್ಕು ಖಂಡಕಾವ್ಯಗಳಲ್ಲಿ ಅವರ ಪ್ರಮುಖ ಚಿಂತನೆಯ ಜಾತ್ಯತೀತ ನಿಲುವುಗಳ ಹುಡುಕಾಟಗಳು ಕೆಲಸ ಮಾಡಿವೆ. ಇಂಥ ಕುಲಕಥನಗಳ ಕಾಲ–ದೇಶ–ನಿರ್ಣಯವನ್ನು ಮಾಡುವುದು ಸುಲಭವಲ್ಲ. ತಳಾದಿ ಜಗತ್ತಿನ ಸೂಕ್ಷ್ಮ ತರಂಗಗಳನ್ನು